International Journal of Kannada Research 2015; 1(3): 46-47

International Journal of Kannada Research
www.kannadajournal.com

ISSN: 2454–5813
IJSR 2015; 1(3): 46-47
© 2015 IJKS
www.kannadajournal.com
Received: 12-10-2015
Accepted: 15-11-2015

**ಡಾ. ಚಂದ್ರಾವತಿ ಶೆಟ್ಟಿ**
ಸಹ ಪ್ರಾಧ್ಯಾಪಕರು
ಶ್ರೀ ಶಾರದಾ ಕಾಲೇಜು, ಬಸ್ರೂರು,
ಕರ್ನಾಟಕ, ಭಾರತ

**Correspondence**
**ಡಾ. ಚಂದ್ರಾವತಿ ಶೆಟ್ಟಿ**
ಸಹ ಪ್ರಾಧ್ಯಾಪಕರು
ಶ್ರೀ ಶಾರದಾ ಕಾಲೇಜು, ಬಸ್ರೂರು,
ಕರ್ನಾಟಕ, ಭಾರತ

# ಡಾ.ಎಸ್.ಎಲ್. ಭೈರಪ್ಪನವರ ಪಾತ್ರ ನಿರ್ಮಾಣದ ಕಥನ ಕುಶಲತೆ

**ಡಾ. ಚಂದ್ರಾವತಿ ಶೆಟ್ಟಿ**

**DOI:** https://doi.org/10.22271/24545813.2015.v1.i3a.854

**ಪೀಠಿಕೆ**

ಪಾತ್ರಗಳು ಕಾದಂಬರಿಗೆ ಅನಿವಾರ್ಯ ಮತ್ತು ಜೀವಾಳ. ಪಾತ್ರಗಳಿಲ್ಲದೆ ಕಾದಂಬರಿಯಿಲ್ಲ ಕಾದಂಬರಿ ಒಂದು ಕಲಾಕೃತಿ ಕಾದಂಬರಿ ರಚನೆಯಲ್ಲಿ ಪಾತ್ರ ಸೃಷ್ಟಿ ಬಹಳ ಮಹತ್ವದ ಅಂಶ. ಕೃತಿಯಲ್ಲಿ ಬಂದಿರುವ ಪಾತ್ರಗಳ ಮುಖಾಂತರವೇ ಆ ಕೃತಿಯ ವಸ್ತು, ಉದ್ದೇಶಗಳನ್ನು ನೆನಪಿಸುವಷ್ಟು ಪಾತ್ರಗಳ ಪ್ರಭಾವವಿರುತ್ತದೆ. ಕೆಲವೊಮ್ಮೆ ಈ ಪಾತ್ರಗಳು ಬೀರುವ ಪ್ರಭಾವ ಅದ್ಭುತವಾದುದು. ಕಾದಂಬರಿಕಾರರ ಹೆಸರೂ ನೆನಪಿರುವುದಿಲ್ಲ. ಕಾದಂಬರಿಯ ಹೆಸರೂ ನೆನಪಿರುವುದಿಲ್ಲ. ಆದರೆ ಆ ಕಾದಂಬರಿಯಲ್ಲಿ ಬರುವ ಪಾತ್ರದ ನೆನಪು ಮಾತ್ರ ಹಸಿರಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಕಾದಂಬರಿಕಾರ ತನ್ನ ಪಾತ್ರದ ಮೂಲಕ ಅಲ್ಲಿ ಹೊಸ ಜೀವ ಪಡೆಯುತ್ತಾನೆ.

ಕನ್ನಡದ ಪ್ರಮುಖ ಕಾದಂಬರಿಕಾರರ ಕಾದಂಬರಿಗಳಲ್ಲಿ ಬರುವ ಅನೇಕ ಪಾತ್ರಗಳು ಓದುಗರ ಮನಸ್ಸಿನ ಮೇಲೆ ಸದಾ ಹಸಿರಾಗಿವೆ. ಕುವೆಂಪು ಅವರ 'ಹೂವಯ್ಯ' (ಕಾನೂರು ಸುಬ್ಬಮ್ಮ ಹೆಗ್ಗಡತಿ) ಕಾರಂತರ 'ಚೋಮ' (ಚೋಮನ ದುಡಿ) ಮಾಸ್ತಿಯವರ 'ಚಿಕ್ಕವೀರರಾಜ' (ಚಿಕ್ಕ ವೀರ ರಾಜೇಂದ್ರ) ನಿರಂಜನರ 'ಹೋರಸ್' (ಮೃತ್ಯುಂಜಯ) ಈ ಮುಂತಾದ ಪಾತ್ರಗಳು ಕೇವಲ ನೆನಪಾಗಿ ಉಳಿಯುವುದಷ್ಟೇ ಅಲ್ಲ ಅನೇಕ ಸಲ ನಿತ್ಯ ಬದುಕಿನ ಚರ್ಚೆಯ ವಿಷಯಗಳೂ ಆಗುತ್ತವೆ.

ಇದೇ ರೀತಿ ಲೇಖಕಿಯರಲ್ಲಿ ತ್ರಿವೇಣಿಯವರ 'ಕಾವೇರಿ' (ಶರಪಂಜರ) ಎಂ.ಕೆ. ಇಂದಿರಾ ಅವರ ಫಣಿಯಮ್ಮ (ಪಣಿಯಮ್ಮ) ಹಾಗೂ ಅನುಪಮಾ ನಿರಂಜನರ 'ಮಾಧವಿ' (ಮಾಧವಿ) ಈ ಪಾತ್ರಗಳು ಉಂಟು ಮಾಡಿದ ಪ್ರಭಾವ ಅಗಾಧವಾದಂತಹದು. ಹೀಗೆಯೇ ಅನೇಕ ಪ್ರಮುಖ ಕಾದಂಬರಿಗಳಲ್ಲಿ ಬರುವ ಮಹತ್ವದ ಪಾತ್ರಗಳನ್ನು ಹೆಸರಿಸುತ್ತಾ ಹೋಗಬಹುದು.

ಪಾತ್ರಗಳು ಕಾದಂಬರಿಕಾರನ ಸ್ವತಂತ್ರ ಸೃಷ್ಟಿ ಅವು ಲೇಖಕನ ನೆರಳಾಗಿರುತ್ತದೆ. ಕೆಲವು ಕಾದಂಬರಿಗಳಲ್ಲಿ ಕಾದಂಬರಿಯ ವಸ್ತು – ಧೋರಣೆ ಪರಿಸರಕ್ಕೆ ಸಂಬಂಧಿಸಿ ಅಲ್ಲಿಯ ಪಾತ್ರಗಳು ಜೀವತಳೆಯುತ್ತದೆ. ಕೆಲವು ಕಾದಂಬರಿಗಳಲ್ಲಿ ಮಾತ್ರ ಕಾದಂಬರಿಕಾರನನ್ನು ಮೀರಿಯೂ ಕೆಲ ಪಾತ್ರಗಳು ಬೆಳೆದು ನಿಂತಿರುತ್ತದೆ. ಕೆಲವು ಕಾದಂಬರಿಗಳಲ್ಲಿ ಬಹುಸಂಖ್ಯೆಯ ಪಾತ್ರಗಳು ಸೃಷ್ಟಿಯಾಗಿದ್ದರೆ ಮತ್ತೇ ಕೆಲವು ಕಾದಂಬರಿಗಳಲ್ಲಿ ಅಲ್ಪ ಸಂಖ್ಯೆ ಪಾತ್ರಗಳಿರುತ್ತವೆ. ಒಟ್ಟಿನಲ್ಲಿ ಕಾದಂಬರಿ ರಚನೆಯಲ್ಲಿ ಪಾತ್ರಗಳ ಸೃಷ್ಟಿ ಹಾಗೂ ಪತ್ರಗಳ ಬೆಳವಣಿಗೆ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದೆ.

ಭೈರಪ್ಪನವರ ಕಾದಂಬರಿಗಳ ಪಾತ್ರ ಸೃಷ್ಟಿಯೂ ಇಡೀ ಕಥಾ ಶಿಲ್ಪಕ್ಕೆ ಅಪಾರವಾದ ದೇಣಿಗೆಯನ್ನು ನೀಡಿದೆ. ಇವರ ಕಾದಂಬರಿಗಳಲ್ಲಿ ನೂರಾರು ಪಾತ್ರಗಳು ಬರುತ್ತವೆ. ಅವುಗಳಲ್ಲಿ ಕೆಲವೊಂದು ಪಾತ್ರಗಳಾದರೂ ಓದುಗರಲ್ಲಿ ಹಸಿರಾಗಿ ಉಳಿಯಬೇಕಾದರೆ ಆ ಪಾತ್ರದ ವ್ಯಕ್ತಿತ್ವ ಮತ್ತು ಗುಣ ವಿಶಿಷ್ಟತೆಯೇ ಪ್ರಮುಖ ಕಾರಣವಾಗಿದೆ.

ಭೈರಪ್ಪನವರು ತಮ್ಮ ಕಾದಂಬರಿಗಳಲ್ಲಿ ನಿಮಿಸಿರುವ ಪಾತ್ರಗಳು ನೈಜ ಬದುಕಿನಲ್ಲಿ ಒಂದಿಲ್ಲೊಂದು ಕಡೆ ಎದುರಾಗುವ ಪಾತ್ರಗಳೇ ಎಂದೆನಿಸುತ್ತದೆ. ಸ್ವತಃ ಕಾದಂಬರಿಕಾರರೇ ತಾನು ನಿರ್ಮಿಸಿದ ಪಾತ್ರಗಳ ಬಗ್ಗೆ ಒಂದೆಡೆ ಈ ರೀತಿಯಾಗಿ ಅಭಿಪ್ರಾಯ ಪಟ್ಟಿರುವುದನ್ನು ಕಾಣಬಹುದು. "ನಾನು ನನ್ನ ಕಾದಂಬರಿಗಳಲ್ಲಿನ ಪಾತ್ರಗಳನ್ನು ಜೀವನದಿಂದ ತೆಗೆದುಕೊಳ್ಳುವುದಿಲ್ಲ. ಆದರೆ ಕೆಲವು ವೇಳೆ ತೆಗೆದುಕೊಳ್ಳಬೇಕಾಗುತ್ತದೆ. ವಾಸ್ತವವಾಗಿ ನೇರವಾಗಿ ಜೀವನದಿಂದ ತೆಗೆದುಕೊಂಡ ಪಾತ್ರಗಳು ಅನೇಕ ವೇಳೆ ಕಲಾತ್ಮಕ ಸಮಸ್ಯೆಯನ್ನು ಒಡ್ಡುತ್ತವೆ. ಏಕೆಂದರೆ ಅವುಗಳ ಬಲ್ಲ ಜೀವನ ವೃತ್ತ, ಅವುಗಳ ಬಗ್ಗೆ ಸ್ವತಂತ್ರವಾಗಿ ಕಲ್ಪನೆ ಮಾಡಲು ತೊಡಕನ್ನುಂಟು ಮಾಡುತ್ತವೆ. ಮತ್ತು ಅವುಗಳ ಸತ್ಯದ

ಅವಗಾಹನೆಯಲ್ಲಿ ತೊಂದರೆ ಮಾಡುತ್ತವೆ. ನಾನು ಕಾದಂಬರಿಗಳಲ್ಲಿ ಜೀವನದಿಂದ ಪಾತ್ರಗಳನ್ನು ತೆಗೆದುಕೊಂಡಾಗಲ್ಲೆಲ್ಲಾ ಅವುಗಳಲ್ಲಿ ಕಲಾತ್ಮಕ ಪರಿಪಕ್ವತೆ ಪಡೆಯುವಲ್ಲಿ ಕಷ್ಟವಾಗಿದೆ. ಮತ್ತು ಹೊಸದಾಗಿಯೇ ಮತ್ತೆ ಬರೆಯಬೇಕಾಯಿತು. ಕೊನೆಗೆ ಅದರಿಂದ ವಿಕಸಿತವಾದ ಸ್ವರೂಪ ಮೂಲ ಪಾತ್ರದ ವಾಸ್ತವಿಕೆ ವ್ಯಕ್ತಿತ್ವಕ್ಕಿಂತ 'ತೀರ್ ಭಿನ್ನವಾಗಿಯೇ ಇತ್ತು. ಹೀಗಾಗಿ ವಸ್ತು ಜಗತ್ತಿನ ವ್ಯಕ್ತಿಗಳಿಗಿಂತ ಕಾದಂಬರಿಯ ಪಾತ್ರಗಳೇ ಹೆಚ್ಚು ನೈಜವಾದುದಾಗಿರುತ್ತದೆ ಎಂಬ ನಂಬಿಕೆ ದೃಢವಾಯಿತು" ಎನ್ನುವರು.

ಪಾತ್ರಗಳ ಚಾರಿತ್ರಿಕ ವಿಕಸನಕ್ಕೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಉತ್ತರವನ್ನು ನೀಡುವಾಗ ಭೈರಪ್ಪನವರು "ಪ್ರಾರಂಭದಲ್ಲೇನೋ ನನ್ನ ಪಾತ್ರಗಳನ್ನು ಚೆನ್ನಾಗಿ ತಿಳಿದಿದ್ದೇನೆ ಅಂತ ಖಂಡಿತ ಅನಿಸುತ್ತೆ. ಆದರೆ ನಿಧಾನವಾಗಿ ಅವುಗಳಲ್ಲಿ ಮತ್ತೂ ಅಪೇಕ್ಷೆಗಳು ಕಾಣಿಸಿಕೊಳ್ಳುತ್ತವೆ. ನಾನು ಅವುಗಳನ್ನು ಅನುಸರಿಸುತ್ತೇನೆ. ನನ್ನ ಅನುಭವದಿಂದ ಕಂಡಿದ್ದೇನೆಂದರೆ ನನ್ನನ್ನು ಅಪ್ರತ್ಯಾತೀತ ಕ್ಷೇತ್ರಗಳಿಗೆ ಮತ್ತು ದಿಕ್ಕುಗಳಿಗೆ ಕೊಂಡೊಯ್ದ ಪಾತ್ರಗಳೇ ಜೀವಂತವಾದವು.

ಭೈರಪ್ಪನವರ ಕಾದಂಬರಿಗಳುದ್ದಕ್ಕೂ ಚಿತ್ರಿತವಾಗಿರುವ ಪಾತ್ರಗಳು ಜೀವಂತ ವ್ಯಕ್ತಿಗಳಂತೆಯೇ ನಡೆದಾಡುತ್ತದೆ. ಹೀಗಾಗಿ ಕಾದಂಬರಿಗಳ ಜೊತೆಗಿನ ಪಠ್ಯ ಸಂಬಂಧವನ್ನು ಮತ್ತು ಸಂದರ್ಭವನ್ನು ಕಳೆದುಕೊಂಡ ನಮ್ಮ ನೆನಪಿನಲ್ಲಿ ನಿಲ್ಲುವ ಜೀವಂತ ಪಾತ್ರಗಳಾಗಿ ಅವು ಕಾಣುತ್ತವೆ. ಇವರ ಕಾದಂಬರಿಗಳಲ್ಲಿನ ಕೆಲವೊಂದು ಪಾತ್ರಗಳಂತೂ ಪರಿಪೂರ್ಣ ಕಲಾಚಿತ್ರವಾಗಿ ಮೂಡಿಬಂದಿದೆ.

ಭೈರಪ್ಪನವರು ತಮ್ಮ ಕಾದಂಬರಿಗಳಲ್ಲಿ ನಿರ್ಮಿಸಿದ ಪಾತ್ರಗಳು ಕಾದಂಬರಿಯ ಕಥಾ ಹಂದರದಲ್ಲಿ ಸಾವಯವ ಸಂಬಂಧವನ್ನು ಪಡೆಯುತ್ತವೆ. ಕಥೆಯ ಚಲನಶೀಲತೆಗೆ ಪೂರಕವಾಗಿ ಅವು ಕೆಲಸ ಮಾಡುತ್ತವೆ. ಇವರ ಕಾದಂಬರಿಗಳಲ್ಲಿ ಸ್ತ್ರೀ ಪುರುಷ ಪಾತ್ರಗಳೆರಡು ಸಮಾನವಾಗಿ ಭಾಗವಹಿಸುತ್ತವೆ. ಇವರು ನಿರ್ಮಿಸಿದ ಕೆಲವು ಪಾತ್ರಗಳು ಕಷ್ಟ-ಸಹಿಷ್ಣುತೆ, ದಯೆ, ವೈಚಾರಿಕತೆ ಅಥವಾ ಅತಿ ವಾಸ್ತವಿಕತೆ ಪ್ರಮಾಣಿಕತೆ, ಮೊದಲಾದವನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರಲು ಹೋರಾಡುತ್ತಿರುವಂತೆ ಕಂಡು ಬಂದರೆ, ಕೆಲವು ಪಾತ್ರಗಳಿಗೆ ಹೊಸ ಮೌಲ್ಯದ ಬಗ್ಗೆ ವಿಶ್ವಾಸ ಮೂಡಿ ಅದನ್ನು ಆಚರಣೆಯಲ್ಲಿ ತರಲು ಹೊರಟು ಸಂಘರ್ಷಕ್ಕೆ ಗುರಿಯಾಗಿಯೋ, ಆಗದೆಯೋ ತಾವು ಗಳಿಸುವ ಅನುಭವದಿಂದ ಸನಾತನ ಮೌಲ್ಯಕ್ಕೆ ಜೋತು ಬೀಳುತ್ತಿರುವಂತೆ ತೋರುತ್ತದೆ. ಇವರು ಸೃಷ್ಟಿಸಿರುವ ಅನೇಕ ಪಾತ್ರಗಳು ಒಂದಲ್ಲ ಒಂದು ಕಾರಣಕ್ಕಾಗಿ ಓದುಗರ ಮೆಚ್ಚುಗೆಯನ್ನೋ, ತಾತ್ಸಾರವನ್ನೋ ಗಳಿಸುತ್ತಾ ಕಾದಂಬರಿ ಸೋತಾಗಲು ಪಾತ್ರಗಳು ಗೆಲ್ಲುತ್ತಾ ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುವಂತಹವುಗಳಾಗಿವೆ.

**ಗ್ರಂಥ ಋಣ**


1. 'ಭೈರಪ್ಪಾಭಿನಂದನಾ' ವೆಂಟೇಶ ಕೆ. ಕೊಂಡಜ್ಜ (ಸಂ) ಕೊಂಡಜ್ಜಿ ಪ್ರಕಾಶನ ಬೆಂಗಳೂರು – ೧೯೯೩
2. 'ಭೈರಪ್ಪನವರ ಕಾದಂಬರಿಗಳು' ಲೀಲಾವತಿ ತೋರಣಗಟ್ಟೆ ಸಿರಿಗನ್ನಡ ಪ್ರಕಾಶನ ಧಾರವಾಡ ೧೯೩೩
3. 'ನಾನೇಕೆ ಬರೆಯುತ್ತೇನೆ' ಡಾ.ಎಸ್.ಎಲ್. ಭೈರಪ್ಪ, ಸಾಹಿತ್ಯ ಭಂಡಾರ ಬೆಂಗಳೂರು – ೧೯೮೯.